**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಆಯವ್ಯಯ/ಸುತ್ತೋಲೆ/ಸ.ಪ್ರದ.ಕಾ/06/2021-22 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ

ಬೆಂಗಳೂರು, ದಿನಾಂಕ: 22-02-2022

**ಸುತ್ತೋಲೆ**

**ವಿಷಯ:** 2021-22ನೇ ಸಾಲಿನ ಶೈಕ್ಷಣಿಕ ಅವಧಿಗೆ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಿಸಿಕೊಂಡಿರುವ ಅತಿಥಿ ಉಪನ್ಯಾಸಕರ ಮಾಹಿತಿ ಕುರಿತು.

**ಉಲ್ಲೇಖ:** ಈ ಕಛೇರಿಯ ಪತ್ರ ಸಂಖ್ಯೆ: ಕಾಶಿಇ/ ನೇವಿ-1/ ಅಉಆ /97 /2021- 22 ದಿನಾಂಕ:26.10.2021

** * * *

2021-22ನೇ ಶೈಕ್ಷಣಿಕ ಸಾಲಿನಲ್ಲಿ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಆದೇಶಿಸಲಾಗಿತ್ತು. ನೇಮಿಸಿಕೊಂಡಿರುವ ಅತಿಥಿ ಉಪನ್ಯಾಸಕರಿಗೆ ಅಕ್ಟೋಬರ್-2021 ರಿಂದ ಡಿಸಂಬರ್-2021ರ ಮಾಹೆವರೆಗೆ ಈಗಾಗಲೇ ಗೌರವಧನವನ್ನು ಇ.ಎಂ.ಐ.ಎಸ್ ಪಟ್ಟಿಯ ಪ್ರಕಾರ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು. ಅನುದಾನದಲ್ಲಿ ಕೊರತೆಯುಂಟಾಗಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲು ಸಮ ಸಂಖ್ಯೆಯ ದಿನಾಂಕ:04.01.2022ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಕೆಲವು ಕಾಲೇಜುಗಳಿಂದ ಮಾತ್ರ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ. ಕಾಲೇಜುಗಳಿಂದ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕೇಂದ್ರ ಕಛೇರಿಯಿಂದ ಮಂಜೂರಾಗಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಹಾಗೂ ತಾವು ಇ.ಎಂ.ಐ.ಎಸ್ ನಲ್ಲಿ ಆಪ್‌ಲೋಡ್ ಮಾಡಿರುವ ಅತಿಥಿ ಉಪನ್ಯಾಸಕರ ಒಟ್ಟು ಸಂಖ್ಯೆಯು ವ್ಯತ್ಯಾಸವಿರುತ್ತದೆ. ಆದ್ದರಿಂದ ಈ ಕೂಡಲೇ ಕೇಂದ್ರ ಕಛೇರಿಯಿಂದ ತಮ್ಮ ಕಾಲೇಜುಗಳಿಗೆ ಮಂಜೂರಾಗಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಮತ್ತು ಪ್ರಾದೇಶಿಕ ಕಛೇರಿಯಿಂದ ಅನುಮೋದನೆಗೊಂಡಿರುವ ಒಟ್ಟು ಅತಿಥಿ ಉಪನ್ಯಾಸಕರುಗಳ ಸಂಖ್ಯೆ (ಅಕ್ಟೋಬರ್-2021ರಿಂದ ಜನವರಿ-2022ರ ಮಾಹೆಯ ದಿ:15.01.2022ರವರೆಗೆ), ಸದರಿ ಸಾಲಿನ ಸೆಮಿಸ್ಟರ್ ಅವಧಿಗೆ ಸಂಬಂಧಿಸಿದಂತೆ ಮಾಹೆವಾರು ಬಿಡುಗಡೆ ಮಾಡಲಾಗಿರುವ ಅನುದಾನದ ಮಾಹಿತಿ ಹಾಗೂ ವ್ಯತ್ಯಾಸವಾಗಿರುವ ಗೌರವಧನದ ಮಾಹಿತಿಯನ್ನು ದಿನಾಂಕ:23.02.2022 ರ ಸಂಜೆ 5.30ರೊಳಗೆ ಈ ಕೆಳಕಂಡ ನಮೂನೆಯಲ್ಲಿ ಎಕ್ಸೆಲ್ ಫಾರಮೇಟ್‌ನಲ್ಲಿ ಇ-ಮೇಲ್ ವಿಳಾಸ: dcegfbudget@gmail.com ಕ್ಕೆ ಮಾಹಿತಿಯನ್ನು ಸಾಫ್ಟ್ ಕಾಫಿಯನ್ನು ಕಳುಹಿಸಲು ಸೂಚಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಪ್ರಸ್ತಾವನೆಗಳನ್ನು ಸ್ವೀಕರಿಸುವುದಿಲ್ಲ ಹಾಗೂ ತಪ್ಪು ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಪ್ರಾಂಶುಪಾಲರೇ ನೇರಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಪ್ರತಿಯನ್ನು:**

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.- ಸದರಿ ಆದೇಶವನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಪ್ರತಿ

# ನಮೂನೆ:

| ಕ್ರ. ಸಂ | ಕಾಲೇಜಿನ ಹೆಸರು | ಕೇಂದ್ರ ಕಛೇರಿಯಿಂದ ಮಂಜೂರಾಗಿರುವ ಒಟ್ಟು ಅತಿಥಿ ಉಪನ್ಯಸಕರುಗಳ ಸಂಖ್ಯೆ | ಪ್ರಾದೇಶಿಕ ಕಛೇರಿಯಿಂದ ಅನುಮೋದನೆ-ಗೊಂಡಿರುವ ಅತಿಥಿ ಉಪನ್ಯಾಸಕರುಗಳ ಸಂಖ್ಯೆ | ಇ.ಎಂ.ಐ.ಎಸ್‌ನಲ್ಲಿ ಅಪ್ ಲೋಡ್ ಮಾಡಿರುವ ಅತಿಥಿ ಉಪನ್ಯಾಸಕರುಗಳ ಸಂಖ್ಯೆ | ಅಕ್ಟೋಬರ್-2021ರ ಮಾಹಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | | ನವೆಂಬರ್-20212021ರ ಮಾಹಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | | ಡಿಸಂಬರ್-2021ರ ಮಾಹಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | | ಬಿಡುಗಡೆ ಮಾಡಬೇಕಾಗಿರುವ ಒಟ್ಟು ಕೊರತೆ ಅನುದಾನ | ಷರಾ |
|---|---|---|---|---|---|---|---|---|---|---|---|---|
| | | | | | ಈಗಾಗಲೇ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | ಕೊರತೆ ಅನುದಾನ | ಈಗಾಗಲೇ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | ಕೊರತೆ ಅನುದಾನ | ಈಗಾಗಲೇ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ | ಕೊರತೆ ಅನುದಾನ | | |
| | | | | | | | | | | | | |